# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 110(1081) |
| 2. | ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ<br>(ನಾಮನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | 12.03.2026 |
| 4. | ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಆಡಳಿತ ಸುಧಾರಣೆ ಕುರಿತಂತೆ ಹಾರನಹಳ್ಳಿ ರಾಮಸ್ವಾಮಿ ಆಯೋಗದಿಂದ ಇಲ್ಲಿಯವರೆಗೆ ಯಾವ ಯಾವ ವರದಿಗಳನ್ನು ಪಡೆಯಲಾಗಿದೆ; (ಇತ್ತೀಚೆಗೆ ಶ್ರೀ ಟಿ.ಎಂ.ವಿಜಯಭಾಸ್ಕರ್, ಮಾಜಿ ಮುಖ್ಯ ಕಾರ್ಯದರ್ಶಿಗಳ ವರದಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ದೇಶಪಾಂಡೆಯವರು ನೀಡಿರುವ ವರದಿಯ ತನಕ) | ರಾಜ್ಯದಲ್ಲಿ ಆಡಳಿತ ಸುಧಾರಣೆ ಕುರಿತಂತೆ ಈ ಕೆಳಕಂಡ ಆಯೋಗಗಳ ವರದಿಗಳನ್ನು ಪಡೆಯಲಾಗಿದೆ.<br><br>1. ಶ್ರೀ ಹಾರನಹಳ್ಳಿ ರಾಮಸ್ವಾಮಿರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಕರ್ನಾಟಕದ ಮೊದಲ ಆಡಳಿತ ಸುಧಾರಣಾ ಆಯೋಗವು 2001 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು.<br>2. ಶ್ರೀ ಟಿ.ಎಂ. ವಿಜಯ್ ಭಾಸ್ಕರ್, ಐಎಎಸ್ (ನಿವೃತ್ತ), ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಏಳು ವರದಿಗಳನ್ನು ಸಲ್ಲಿಸಿತು.<br>3. ಶ್ರೀ ಆರ್.ವಿ. ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಮೂರು ವರದಿಗಳನ್ನು ಸಲ್ಲಿಸಿದೆ. |
| ಆ | ಸದರಿ ವಿವಿಧ ವರದಿಗಳಲ್ಲಿ ಸರ್ಕಾರ ಅಳವಡಿಸಿಕೊಂಡಿರುವ ಅಂಶಗಳ ಮಾಹಿತಿ ಒದಗಿಸುವುದು; | ಇಲಾಖಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ |
| ಇ. | ಸರ್ಕಾರದ ಪರಿಶೀಲನೆಯಲ್ಲಿರುವ ಅಂಶಗಳ ಬಗ್ಗೆ ವಿವರವಾದ ಮಾಹಿತಿ ಒದಗಿಸುವುದು; | ಇಲಾಖಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಈ. | ಆಡಳಿತ ಸುಧಾರಣೆ ಕುರಿತಂತೆ ಕೆಲವು ಇಲಾಖೆಗಳನ್ನು ಇತರೆ ಇಲಾಖೆಗಳೊಂದಿಗೆ ಮಿಳಿತಗೊಳಿಸುವಂತೆ (Merge) ಶಿಫಾರಸ್ಸು ಮಾಡಿರುವ ವಿವರವನ್ನು ಒದಗಿಸುವುದು; ಈ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು? | ಕೆಲವು ಇಲಾಖೆಗಳನ್ನು ಇತರೆ ಇಲಾಖೆಗಳೊಂದಿಗೆ ಮಿಳಿತಗೊಳಿಸುವಂತೆ (Merge) ಮಾಡಲಾಗಿರುವ ಶಿಫಾರಸ್ಸುಗಳು ಈ ಕೆಳಗಿನಂತಿದೆ:<br>1. ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು (DPE) ಹಣಕಾಸು ಇಲಾಖೆಯೊಂದಿಗೆ ವಿಲೀನಗೊಳಿಸುವುದು (KARC-2 ಎರಡನೇ ವರದಿ) - ಶಿಫಾರಸ್ಸನ್ನು ಜಾರಿಗೆ ತರಲಾಗಿದೆ.<br>2. ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ(PRED) ಮತ್ತು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ(KRRDA) ವಿಲೀನಗೊಳಿಸುವುದು (KARC-2 ಮೂರನೇ ವರದಿ) - ಶಿಫಾರಸು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ (RD&PR) ಪರಿಶೀಲನೆಯಲ್ಲಿದೆ.<br>3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (BDA) ಮತ್ತು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (BMRDA) ವಿಲೀನಗೊಳಿಸುವುದು (KARC-2 ಮೂರನೇ ವರದಿ) - ಶಿಫಾರಸ್ಸನ್ನು ಜಾರಿಗೆ ತರಲಾಗಿಲ್ಲ.<br>4. ಸಾಮಾಜಿಕ ಅರಣ್ಯ ವಿಭಾಗಗಳನ್ನು ಪ್ರಾದೇಶಿಕ ಅರಣ್ಯ ವಿಭಾಗಗಳೊಂದಿಗೆ ವಿಲೀನಗೊಳಿಸುವುದು (KARC-2 ಆರನೇ ವರದಿ) ವಿಜಯಪುರ, ಕಲಬುರಗಿ, ರಾಯಚೂರು, ಬೆಂಗಳೂರು ಗ್ರಾಮಾಂತರ, ಗದಗ, ದಾವಣಗೆರೆ, ಕೊಪ್ಪಳ, ಬೀದರ್, ಯಾದಗಿರಿ, ಇತ್ಯಾದಿ 10 ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶ/ಕೆಲಸದ ಹೊರೆ ಪರಿಗಣನೆಗಳ ಆಧಾರದ ಮೇಲೆ ವಿಲೀನಗೊಳಿಸಲು ಆಯೋಗವು ಶಿಫಾರಸು ಮಾಡಿದೆ - ಈ ಶಿಫಾರಸ್ಸನ್ನು ಜಾರಿಗೆ ತಂದಿಲ್ಲ. |

| | | |
|---|---|---|
| | | 5. ನೀರಾವರಿ ನಿಗಮಗಳೊಂದಿಗೆ ಕಮಾಂಡ್ ಏರಿಯಾ ಅಭಿವೃದ್ಧಿ ಪ್ರಾಧಿಕಾರಗಳ (CADA) ವಿಲೀನ (KARC-2 ಆರನೇ ವರದಿ) - ಈ ಶಿಫಾರಸ್ಸು ಜಲಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಪರಿಶೀಲನೆಯಲ್ಲಿದೆ.<br>6. ಪ್ಯಾರಾಸ್ಟಾಟಲ್‌ಗಳ ಮುಚ್ಚುವಿಕೆ / ವಿಲೀನದ ಶಿಫಾರಸ್ಸುಗಳು: 7 ಪ್ಯಾರಾಸ್ಟಾಟಲ್‌ಗಳನ್ನು ಮುಚ್ಚುವುದು ಮತ್ತು 9 ಪ್ಯಾರಾಸ್ಟಾಟಲ್‌ಗಳನ್ನು (7 ಇತರ ಪ್ಯಾರಾಸ್ಟಾಟಲ್‌ಗಳೊಂದಿಗೆ, ಒಂದು ಪ್ಯಾರಾಸ್ಟಾಟಲ್ ಸರ್ಕಾರಿ ಇಲಾಖೆಯೊಂದಿಗೆ, ಒಂದು ಪ್ಯಾರಾಸ್ಟಾಟಲ್ ವಿಶ್ವವಿದ್ಯಾಲಯದೊಂದಿಗೆ) ವಿಲೀನಗೊಳಿಸಲು ಆಯೋಗವು ಶಿಫಾರಸ್ಸು ಮಾಡಿದೆ (KARC-2 ಒಂಬತ್ತನೇ ವರದಿ) - ಈ ಶಿಫಾರಸ್ಸುಗಳು ಅನುಷ್ಠಾನಕ್ಕೆ ಪರಿಗಣನೆಯಲ್ಲಿವೆ.<br><br>ಶಿಫಾರಸ್ಸುಗಳನ್ನು ಪ್ರಾರಂಭಿಸದಿರಲು/ಅನುಷ್ಠಾನ ಗೊಳಿಸದಿರಲು/ ಪರಿಶೀಲನೆಯಲ್ಲಿದೆ/ಪರಿಗಣನೆಯಲ್ಲಿದೆ ಎಂಬುದಕ್ಕೆ ಕಾರಣಗಳು:<br>i. ಶಿಫಾರಸ್ಸಿಗೆ ಸಂಬಂಧಪಟ್ಟ ಇಲಾಖೆಗಳ ನಡುವಿನ ವಿವರವಾದ ಪರಿಶೀಲನೆಯ ಅಗತ್ಯತೆ,<br>ii. ಕಾನೂನು/ ಆಡಳಿತಾತ್ಮಕ ಪರಿಣಾಮಗಳ ಪರಿಶೀಲನೆ,<br>iv. ಮಾನವ ಸಂಪನ್ಮೂಲ ಮತ್ತು ವೃಂದ ಸಂಬಂಧಿತ ಸಮಸ್ಯೆಗಳು,<br>v. ಹಣಕಾಸಿನ ಪರಿಣಾಮಗಳ ಪರಿಶೀಲನೆ,<br>vi. ಅಗತ್ಯವಿರುವಲ್ಲೆಲ್ಲಾ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವುದು ಅವಲಂಬಿಸಿರುತ್ತದೆ |

**ಸಂಖ್ಯೆ: ಸಿಆಸುಇ (ಆಸು) 11 ಅಸಖ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

| Annexure-1 | | | | | | |
|---|---|---|---|---|---|---|
| **Departments** | **Total recommendations** | **Recommendations implemented** | **Partially implemented recommendations** | **Recommendations under implementation** | **Recommendations under examination** | **Recommendations not accepted** |
| Agriculture | 141 | 61 | 1 | 3 | 68 | 8 |
| AHVS | 113 | 31 | 0 | 17 | 49 | 16 |
| BC Welfare | 45 | 15 | 1 | 1 | 27 | 1 |
| Commerce & ind | 326 | 115 | 8 | 20 | 173 | 10 |
| Cooperation | 184 | 35 | 2 | 42 | 91 | 14 |
| DIPR | 29 | 6 | 2 | 0 | 21 | 0 |
| DPAR | 135 | 26 | 0 | 1 | 104 | 4 |
| DPAR e-gov | 190 | 46 | 5 | 8 | 125 | 6 |
| DPAR-AR | 39 | 8 | 0 | 4 | 26 | 1 |
| Energy | 165 | 111 | 2 | 2 | 24 | 26 |
| Finance Dept | 280 | 54 | 10 | 57 | 149 | 10 |
| Fisharies | 61 | 13 | 1 | 22 | 25 | 0 |
| Food & Civil Supplies | 119 | 59 | 1 | 10 | 21 | 28 |
| Forest | 181 | 35 | 8 | 25 | 99 | 14 |
| Health & Family Welfare | 196 | 55 | 5 | 27 | 98 | 11 |
| Higher Education | 146 | 21 | 4 | 1 | 120 | 0 |
| Home | 186 | 42 | 7 | 5 | 98 | 34 |
| Horticulture | 119 | 63 | 0 | 10 | 46 | 0 |
| Housing | 115 | 21 | 9 | 16 | 57 | 12 |
| IDD | 51 | 22 | 1 | 16 | 11 | 1 |
| IT & BT | 18 | 2 | 0 | 0 | 16 | 0 |
| Kan & Cul | 60 | 8 | 4 | 9 | 38 | 1 |
| Labour | 154 | 44 | 2 | 43 | 34 | 31 |
| LAW, DPAL | 68 | 35 | 0 | 5 | 25 | 3 |
| Medical Education | 100 | 15 | 7 | 13 | 61 | 4 |
| MI & GW | 65 | 18 | 7 | 4 | 27 | 9 |
| Minority Welfare | 37 | 11 | 0 | 3 | 21 | 2 |
| Planning | 93 | 35 | 0 | 12 | 33 | 13 |
| PWD | 119 | 34 | 7 | 16 | 51 | 11 |
| RDPR | 208 | 39 | 17 | 16 | 118 | 18 |

| | | | | | | |
|---|---|---|---|---|---|---|
| Revenue | 655 | 281 | 4 | 141 | 222 | 7 |
| School Education | 174 | 46 | 7 | 37 | 78 | 6 |
| Sericulture | 50 | 14 | 4 | 9 | 22 | 1 |
| Skill Development | 126 | 52 | 10 | 24 | 38 | 2 |
| Social Welfare | 171 | 86 | 2 | 14 | 58 | 11 |
| ST Welfare | 21 | 9 | 0 | 0 | 12 | 0 |
| Tourism | 70 | 13 | 4 | 8 | 43 | 2 |
| Transport | 235 | 185 | 0 | 21 | 23 | 6 |
| Urban Development | 522 | 161 | 17 | 158 | 154 | 32 |
| Water Resource | 105 | 36 | 14 | 3 | 48 | 4 |
| WCD | 126 | 38 | 11 | 10 | 63 | 4 |
| Youth Emp & Sports | 33 | 13 | 2 | 6 | 11 | 1 |
| **Total - All Departments** | **6031** | **2014** | **186** | **839** | **2628** | **364** |